JULY 25, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

**ಚಿತ್ರದುರ್ಗದ ಬರ ಪೀಡಿತ ಪ್ರದೇಶಗಳಿಗೆ,** ಇಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಭೇಟಿ, ಖುದ್ದು ಪರಿಶೀಲನೆ.

**ಭಾರತ ಸೆಮಿ ಕಂಡಕ್ಟರ್ ಮಿಷನ್;** ಬೆಂಗಳೂರಿನ ಕೆಂಪೇಗೌಡ ವಿಮಾನ ನಿಲ್ದಾಣದ ಬಳಿ, ಅತ್ಯಾಧುನಿಕ ಸೆಮಿಕಂಡಕ್ಟರ್ ಪಾರ್ಕ್ ಸ್ಥಾಪನೆ.

**ಬಳ್ಳಾರಿ–ಗುಂತ್ಕಲ್** ನೂತನ ರೇಲ್ವೆ ಮಾರ್ಗ ನಿರ್ಮಾಣ ಯೋಜನೆಗೆ, ಕೇಂದ್ರ ಸಚಿವ ಸಂಪುಟ ಅನುಮೋದನೆ – ಸಚಿವ ಪ್ರಲ್ಹಾದ ಜೋಶಿ, ಕೃತಜ್ಞತೆ.

**ಇಂದು, ದೇವಶಯನಿ ಆಷಾಢ ಏಕಾದಶಿ;** ವಾರಕರಿ ಸಂತರಿಂದ, ನಾಡಿನಾದ್ಯಂತ, ವಿಠ್ಠಲ–ರುಕ್ಮಾಯಿ ಮಂದಿರಗಳಲ್ಲಿ, ವಿಶೇಷ ಪೂಜೆ.

<><><>

**ಈಗ ವಾರ್ತೆಗಳ ವಿವರ**

<><><>

**ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ,** ಸಚಿವ ಸಂಪುಟದ ತಮ್ಮ ಹಿರಿಯ ಸಹೋದ್ಯೋಗಿಗಳೊಂದಿಗೆ, ಚಿತ್ರದುರ್ಗ ಜಿಲ್ಲೆಯ, ವಿವಿಧ ಬರ ಪೀಡಿತ ಪ್ರದೇಶಗಳಿಗೆ ಇಂದು ಬೆಳಗ್ಗೆ ಭೇಟಿ ನೀಡಿ, ಖುದ್ದು ಅವಲೋಕಿಸಲಿದ್ದಾರೆ. ಬಳಿಕ ಮಧ್ಯಾಹ್ನ 12:30ಕ್ಕೆ ಚಿತ್ರದುರ್ಗದ ಶ್ರೀ ಮುರುಘರಾಜೇಂದ್ರ ಬೃಹನ್ಮಠದ ಅನುಭವ ಮಂಟಪದಲ್ಲಿ, ಬೆಂಗಳೂರು ಕಂದಾಯ ವಿಭಾಗದ, ವಿವಿಧ ಜಿಲ್ಲೆಗಳ ಅಭಿವೃದ್ಧಿ ಕಾಮಗಾರಿಗಳು ಹಾಗೂ ಅನುಷ್ಠಾನದ ಪ್ರಗತಿಯನ್ನು, ಅಧಿಕಾರಿಗಳೊಂದಿಗೆ, ಪರಿಶೀಲಿಸಲಿದ್ದಾರೆ.

<><><>

**ಕೇಂದ್ರ ಪುರಸ್ಕೃತ,** ಎರಡನೇ ಆವೃತ್ತಿಯ, ಸೆಮಿಕಾನ್ ಯೋಜನೆಗೆ, 1 ಲಕ್ಷ 27 ಸಾವಿರ ಕೋಟಿ ರೂಪಾಯಿ ಮೊತ್ತದ ಅನುದಾನ ಲಭಿಸಿದ್ದು, ಸೆಮಿಕಂಡಕ್ಟರ್ ಪರಿಸರ ವ್ಯವಸ್ಥೆ ನಿರ್ಮಾಣಕ್ಕೆ, ಹೊಸ ವೇಗ ದೊರೆಯಲಿದೆ ಎಂದು, ಬೃಹತ್ ಕೈಗಾರಿಕೆಗಳ ಖಾತೆ ಸಚಿವ ಎಂ.ಬಿ.ಪಾಟೀಲ, ಎಕ್ಸ್ ಮಾಧ್ಯಮದಲ್ಲಿ ತಿಳಿಸಿದ್ದಾರೆ. ಭಾರತ ಸೆಮಿ ಕಂಡಕ್ಟರ್ ಮಿಷನ್ 2.0 ಅಡಿಯಲ್ಲಿ, ಬೆಂಗಳೂರಿನ ಕೆಂಪೇಗೌಡ ವಿಮಾನ ನಿಲ್ದಾಣದ ಬಳಿ, ಅತ್ಯಾಧುನಿಕ ಸೆಮಿಕಂಡಕ್ಟರ್ ಪಾರ್ಕ್ ಅಭಿವೃದ್ಧಿ ಪಡಿಸಲಾಗುವುದು ಎಂದಿದ್ದಾರೆ. ಕೌಶಲ್ಯಯುತ ಮಾನವ ಸಂಪನ್ಮೂಲದ ಬಲದೊಂದಿಗೆ, ಕರ್ನಾಟಕ ಇಂದು ಜಾಗತಿಕ ಹೂಡಿಕೆದಾರರ ಮೊದಲ ಆಯ್ಕೆಯಾಗಿದೆ ಎಂದು, ಅವರು ಸಂತಸ ವ್ಯಕ್ತ ಪಡಿಸಿದ್ದಾರೆ.

<><><>

**ಕರ್ನಾಟಕ–ಆಂಧ್ರಪ್ರದೇಶದ ನಡುವೆ,** ಸಾವಿರದ 264 ಕೋಟಿ ರೂಪಾಯಿ ವೆಚ್ಚದ, ಬಳ್ಳಾರಿ–ಗುಂತ್ಕಲ್ ರೇಲ್ವೆ ಮಾರ್ಗ ನಿರ್ಮಾಣ ಯೋಜನೆಗೆ, ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ, ಕೇಂದ್ರ ಸಚಿವ ಸಂಪುಟ ಅನುಮೋದಿಸಿದೆ. ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ ಪ್ರಲ್ಹಾದ ಜೋಶಿ, ಪ್ರಧಾನಮಂತ್ರಿ, ರೇಲ್ವೆ ಖಾತೆ ಸಚಿವ ಅಶ್ವಿನಿ ವೈಷ್ಣವ ಹಾಗೂ ರಾಜ್ಯ ಖಾತೆ ಸಚಿವ, ವಿ.ಸೋಮಣ್ಣ ಅವರನ್ನು, ಅಭಿನಂದಿಸಿದ್ದಾರೆ. ಬಳ್ಳಾರಿ–ಗುಂತ್ಕಲ್ ನೂತನ ರೈಲು ಮಾರ್ಗ ನಿರ್ಮಾಣದಿಂದ, 99 ಗ್ರಾಮಗಳಿಗೆ ಸಂಪರ್ಕ ಕಲ್ಪಿಸಲಿದೆ. 7 ಲಕ್ಷ ಜನರಿಗೆ ಅನುಕೂಲವಾಗಲಿದೆ. ರೇಲ್ವೆ ಜಾಲ 46 ಕಿಲೋ ಮೀಟರ್ ವಿಸ್ತರಣೆಯಾಗಲಿದ್ದು, ಆರ್ಥಿಕ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದು ತಿಳಿಸಿದ್ದಾರೆ.

<><><>

**ಚಿಕ್ಕಮಗಳೂರು ಜಿಲ್ಲೆಗಾಗಿ,** ಮಾಯ್ ಭಾರತ್ ಉಪಕ್ರಮದಡಿ, ಪ್ರಸಕ್ತ ಸಾಲಿಗೆ ಕ್ರಿಯಾ ಯೋಜನೆ ಸಿದ್ಧಗೊಂಡಿದೆ. ಜಿಲ್ಲಾಧಿಕಾರಿ ಭಂವರ ಸಿಂಗ್ ಮೀನಾ ಅಧ್ಯಕ್ಷತೆಯಲ್ಲಿ ಜರುಗಿದ, ಮಾಯ್ ಭಾರತ್ ಸಲಹಾ ಕೇಂದ್ರದ ಸಭೆಯಲ್ಲಿ, ಜಿಲ್ಲಾ ಯುವಜನ ಸೇವಾ ಅಧಿಕಾರಿ ಐಶ್ವರ್ಯಾ ಶ್ರೀನಿವಾಸ, ಈ ವಿಷಯ ತಿಳಿಸಿದರು. ವಿಕಸಿತ ಭಾರತ ಪಾದಯಾತ್ರೆ, ನಶೆ ಮುಕ್ತ ಭಾರತ್ ಅಭಿಯಾನ, ನಾಯಕತ್ವ ಶಿಬಿರಗಳು, ಜನಜಾಗೃತಿ ಕಾರ್ಯಕ್ರಮಗಳು, ಸ್ವಚ್ಛತಾ ಅಭಿಯಾನ, ಸ್ವಉದ್ಯೋಗ ತರಬೇತಿ ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ ಎಂದರು. ಕೊಡಗು ಜಿಲ್ಲೆಯ, ಯುವಜನರಿಗೆ, ಭಾರತ ಡಿಜಿಟಲ್ ವೇದಿಕೆ ಅಡಿ, ಯುವ ಕಲ್ಯಾಣ ಯೋಜನೆಗಳು, ಕೌಶಲ್ಯಾಭಿವೃದ್ಧಿ ತರಬೇತಿ ಶಿಬಿರ ಆಯೋಜಿಸಲಾಗಿದೆ ಎಂದು ಜಿಲ್ಲಾಧಿಕಾರಿ ಎಸ್.ಜೆ. ಸೋಮಶೇಖರ ತಿಳಿಸಿದ್ದಾರೆ.

<><><>

**ಮಾದಕ ದ್ರವ್ಯ ವ್ಯಸನದಿಂದ** ಯುವ ಸಮುದಾಯ, ದೂರವಿರಬೇಕು. ಅವುಗಳ ಸರಬರಾಜು ತಡೆಗೆ, ಶಾಸನಬದ್ಧ ವ್ಯವಸ್ಥೆ ಸಮನ್ವಯದಿಂದ ಕರ್ತವ್ಯ ನಿರ್ವಹಿಸಬೇಕು ಎಂದು, ಬೆಳಗಾವಿ ಜಿಲ್ಲೆ ಪ್ರಧಾನ ಸತ್ರ ನ್ಯಾಯಾಧೀಶ ಮಂಜುನಾಥ ನಾಯಕ ಹೇಳಿದ್ದಾರೆ. ಬೆಳಗಾವಿ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ, ಮಾದಕ ದ್ರವ್ಯ ಸಾಗಣೆ ಹಾಗೂ ಬಳಕೆ ತಡೆಗಟ್ಟುವಿಕೆ, ಸಮಾಲೋಚನಾ ಸಭೆ ಉದ್ಘಾಟಿಸಿ, ಮಾತನಾಡಿದರು.

<><><>

**ಮಂಜುನಾಥ ನಾಯಕ ಧ್ವನಿ – 31 ಸೆಕೆಂದುಗಳು**

<><><>

**ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಹಿನ್ನೆಲೆ,** ಮತದಾರರ ಅರ್ಜಿ ನಮೂನೆ ವಿತರಣೆ ಕಾರ್ಯ, ಶೇಕಡ 100 ರಷ್ಟು ಪೂರ್ಣಗೊಂಡಿದ್ದು, ಶೇಕಡ 69 ದಶಾಂಶ 7–4 ರಷ್ಟು ನಮೂನೆಗಳ ಗಣಕೀಕರಣ ಸಂಪನ್ನಗೊಂಡಿದೆ ಎಂದು, ಧಾರವಾಡ ಜಿಲ್ಲಾಧಿಕಾರಿ ಆರ್.ಸ್ನೇಹಲ್ ತಿಳಿಸಿದ್ದಾರೆ. ಹಾವೇರಿ ಜಿಲ್ಲೆಯಲ್ಲಿ, 13 ಲಕ್ಷದ 35 ಸಾವಿರ ಮತದಾರ ಅರ್ಜಿಗಳನ್ನು ವಿತರಿಸಲಾಗಿದೆ. ಈ ಪೈಕಿ 11 ಲಕ್ಷದ 62 ಸಾವಿರ ಅರ್ಜಿಗಳು, ಶೇಕಡ 87 ದಶಾಂಶ 0–9 ರಷ್ಟು ಡಿಜಿಟಲೀಕರಿಸಲಾಗಿದೆ ಎಂದು ಜಿಲ್ಲಾಧಿಕಾರಿ ವಿಜಯ ಮಹಾಂತೇಶ ದಾನಮ್ಮನವರ ಮಾಹಿತಿ ನೀಡಿದ್ದಾರೆ.

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(37 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಇಂದು ಆಷಾಢ** ಏಕಾದಶಿ. ಪಂಢರಪುರದಲ್ಲಿ ದೇವಶಯನಿ ಆಷಾಢ ಏಕಾದಶಿ ಪ್ರಯುಕ್ತ, ಇಂದಿನಿಂದ ನಾಲ್ಕು ತಿಂಗಳು ವಿಶೇಷ ಪೂಜೆ, ಉತ್ಸವಗಳು ನಡೆಯಲಿವೆ. ಕರ್ನಾಟಕ, ಮಹಾರಾಷ್ಟ್ರ, ತೆಲಂಗಾಣ ಹಾಗೂ ಆಂಧ್ರಪ್ರದೇಶ ಸೇರಿದಂತೆ, ದೇಶದ ವಿವಿಧ ಮೂಲೆಗಳಿಂದ, ಲಕ್ಷಾಂತರ ವಾರಕರಿ ಸಂತರು, ಸಂತ ಜ್ಞಾನೇಶ್ವರ, ಸಂತ ತುಕಾರಾಮರ ಪಾದುಕೆಗಳನ್ನು ಹೊತ್ತ ದಿಂಡಿಗಳೊಂದಿಗೆ, ಪಾದಯಾತ್ರೆ ಮೂಲಕ ಪಂಢರಪುರ ತಲುಪಿದ್ದಾರೆ. ಚಂದ್ರಭಾಗಾ ನದಿಯಲ್ಲಿ ಮಿಂದು, ಶ್ರೀ ವಿಠ್ಠಲ–ರುಕ್ಮಾಯಿ ದರ್ಶನ ಪಡೆಯುತ್ತಿದ್ದಾರೆ. ಧಾರವಾಡ ಹಾಗೂ ಶಿವಮೊಗ್ಗದ, ಸಂತ ನಾಮದೇವ ಸಿಂಪಿ ಸಮಾಜ, ಶ್ರೀ ವಿಠ್ಠಲ ರುಕ್ಮಾಯಿ ಮಂದಿರದಲ್ಲಿ, ಇಂದು ಆಷಾಢ ಏಕಾದಶಿ ಪ್ರಯುಕ್ತ, ವಿಶೇಷ ಪೂಜಾ ಕೈಂಕರ್ಯಗಳನ್ನು ಆಯೋಜಿಸಿದೆ.

<><><>

**ಆಕಾಶವಾಣಿಯ,** ಮನ್ ಕಿ ಬಾತ್ ಕಾರ್ಯಕ್ರಮದ, 136ನೇ ಆವೃತ್ತಿ, ನಾಳೆ ಭಾನುವಾರ, ಬೆಳಗ್ಗೆ 11 ಗಂಟೆಗೆ ಪ್ರಸಾರವಾಗಲಿದ್ದು, ಪ್ರಧಾನಮಂತ್ರಿ ನರೇಂದ್ರ ಮೋದಿ, ತಮ್ಮ ಮನದ ಮಾತುಗಳನ್ನು ಹಂಚಿಕೊಳ್ಳಲಿದ್ದಾರೆ.

ಆಕಾಶವಾಣಿ, ದೂರದರ್ಶನದ ಎಲ್ಲಾ ವಾಹಿನಿ ಸೇರಿದಂತೆ, ನ್ಯೂಸ್ ಆನ್ ಏರ್ ಆಪ್, ಯೂಟ್ಯೂಬ್, ಮೈ ಗಾವ್ ಡಾಟ್ ಇನ್ ಮೂಲಕ, ಮನದ ಮಾತು ಪ್ರಸಾರವಾಗಲಿದೆ. ಹಿಂದಿ ಅವತರಣಿಕೆ ಬಳಿಕ, ಕನ್ನಡ ಅನುವಾದ, ಮನದ ಮಾತು ಬಿತ್ತರಗೊಳ್ಳಲಿದ್ದು, ನಾಳೆ ರಾತ್ರಿ 8 ಗಂಟೆಗೆ, ಕನ್ನಡ ಅವತರಣಿಕೆ, ಮರು ಪ್ರಸಾರವಾಗಲಿದೆ.

<><><>

**ಗ್ಲಾಸ್ಗೋದಲ್ಲಿ ಆರಂಭಗೊಂಡ, ಕಾಮನವೆಲ್ತ್** ಕ್ರೀಡಾಕೂಟದಲ್ಲಿ, ಉದ್ದ ಜಿಗಿತ ವಿಭಾಗದಲ್ಲಿ, ಬೆಂಗಳೂರಿನ ಲೋಕೇಶ ಸತ್ಯನಾಥನ್ ಪಾಲ್ಗೊಂಡಿದ್ದಾರೆ. ವಿಶೇಷಚೇತನ ಕ್ರೀಡಾಪಟುಗಳ ವಿಭಾಗದಲ್ಲಿ, ಒಟ್ಟು ನಾಲ್ಕು ಜನ ಕ್ರೀಡಾಪಟುಗಳು, ಕರ್ನಾಟಕದಿಂದ, ಭಾರತವನ್ನು ಪ್ರತಿನಿಧಿಸುತ್ತಿದ್ದಾರೆ ಎಂದು, ರಾಜ್ಯ ವಿಶೇಷಚೇತನರ ಕ್ರೀಡಾಸಂಸ್ಥೆ ಉಪಾಧ್ಯಕ್ಷ, ಪದ್ಮಶ್ರೀ ಕೆ.ವೈ.ವೆಂಕಟೇಶ ತಿಳಿಸಿದ್ದಾರೆ.

<><><>

**ಕೆ.ವೈ ವೆಂಕಟೇಶ ಧ್ವನಿ – 41 ಸೆಕೆಂದುಗಳು**

<><><>

**ಪ್ರಸಕ್ತ, 2026–27ನೇ ಸಾಲಿನ** ಮುಂಗಾರು ಹಾಗೂ ಹಿಂಗಾರು ಹಂಗಾಮುಗಳಿಗೆ, ಹವಾಮಾನ ಆಧಾರಿತ ಬೆಳೆವಿಮೆ ಯೋಜನೆ ಅಡಿ, ಕೇಂದ್ರ ಸರ್ಕಾರ ದಕ್ಷಿಣಕನ್ನಡ ಜಿಲ್ಲೆಗೆ, ಅಡಕೆ ಹಾಗೂ ಕಾಳುಮೆಣಸು ಬೆಳೆಗಳನ್ನು ಸಹ, ಸೇರ್ಪಡೆಗೊಳಿಸಿದೆ. ಪ್ರತಿ ಹೆಕ್ಟರ್ ಅಡಕೆಗೆ, 6 ಸಾವಿರದ ನಾಲ್ಕು ನೂರು ರೂಪಾಯಿ ಹಾಗೂ ಕಾಳು ಮೆಣಸಿಗೆ, 2 ಸಾವಿರದ 350 ರೂಪಾಯಿ, ಬೆಳೆ ವಿಮೆ ಪ್ರೀಮಿಯಂ, ರೈತರು ಪಾವತಿಸಬೇಕಿದೆ. ಈ ತಿಂಗಳ 31, ಹೆಸರು ನೋಂದಾಯಿಸಲು ಕೊನೆ ದಿನ.

<><><>

**ಬೆಂಗಳೂರು ಕೃಷಿ ವಿಶ್ವವಿದ್ಯಾಲಯ,** ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ, ಇಂದು ಬೆಳಗ್ಗೆ 7 ಗಂಟೆಯಿಂದ, "ರೈತ ಸಂತೆ" ಆಯೋಜಿಸಿದೆ. ಬಿತ್ತನೆ ಬೀಜ, ರೇಷ್ಮೆ ಕೃಷಿಯ ಉಪಉತ್ಪನ್ನ, ತೋಟಗಾರಿಕೆ ಉಪಕರಣ ಹಾಗೂ ತಾಜಾ ಹಣ್ಣು, ತರಕಾರಿ, ಮೌಲ್ಯವರ್ಧಿತ ಸಿರಿಧಾನ್ಯ ಪದಾರ್ಥ, ಗುಣಮಟ್ಟದ ರಾಜಮುಡಿ ಅಕ್ಕಿ, ತಾಜಾ ಅಣಬೆ ಖರೀದಿಸಬಹುದು.

<><><>

**ಈಗ ಸಂಕ್ಷಿಪ್ತ ಸುದ್ದಿಗಳು:**

**'ರಾಷ್ಟ್ರೀಯ ನೈಸರ್ಗಿಕ ಕೃಷಿ ಮಿಷನ್'** ಯೋಜನೆ ಅಡಿ, ದಾವಣಗೆರೆ ಜಿಲ್ಲೆಯಲ್ಲಿ, ಮಣ್ಣಿನ ಫಲವತ್ತತೆ ಸಂರಕ್ಷಣೆ ಹಾಗೂ ರೈತರ ಆದಾಯ ಹೆಚ್ಚಿಸಲು, ಕೃಷಿ ಇಲಾಖೆ ಅಧಿಕಾರಿಗಳು ಸಮರ್ಪಕವಾಗಿ ಯೋಜಿಸುವಂತೆ, ಜಿಲ್ಲಾ ಪಂಚಾಯಿತಿ ಸಿ.ಇ.ಓ. ಗಿತ್ತೆ ಮಾಧವ ವಿಠ್ಠಲ ರಾವ, ಸೂಚಿಸಿದ್ದಾರೆ.

**ರಾಯಚೂರು ಜಿಲ್ಲೆಯಲ್ಲಿ,** ಕಳೆದ 6 ತಿಂಗಳುಗಳಲ್ಲಿ, 20 ನಕಲಿ ವೈದ್ಯರ ವಿರುದ್ಧ ಕ್ರಮ ಕೈಗೊಂಡು, 2 ಲಕ್ಷದ 20 ಸಾವಿರ ದಂಡ ಆಕರಿಸಲಾಗಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ, ಡಾಕ್ಟರ್ ಎಂ.ಎನ್ ನಂದಿತಾ ತಿಳಿಸಿದ್ದಾರೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

**ಚಿತ್ರದುರ್ಗದ ಬರ ಪೀಡಿತ ಪ್ರದೇಶಗಳಿಗೆ,** ಇಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಭೇಟಿ, ಖುದ್ದು ಪರಿಶೀಲನೆ.

**ಭಾರತ ಸೆಮಿ ಕಂಡಕ್ಟರ್ ಮಿಷನ್;** ಬೆಂಗಳೂರಿನ ಕೆಂಪೇಗೌಡ ವಿಮಾನ ನಿಲ್ದಾಣದ ಬಳಿ, ಅತ್ಯಾಧುನಿಕ ಸೆಮಿಕಂಡಕ್ಟರ್ ಪಾರ್ಕ್ ಸ್ಥಾಪನೆ.

**ಬಳ್ಳಾರಿ–ಗುಂತ್ಕಲ್** ನೂತನ ರೇಲ್ವೆ ಮಾರ್ಗ ನಿರ್ಮಾಣ ಯೋಜನೆಗೆ, ಕೇಂದ್ರ ಸಚಿವ ಸಂಪುಟ ಅನುಮೋದನೆ – ಸಚಿವ ಪ್ರಲ್ಹಾದ ಜೋಶಿ, ಕೃತಜ್ಞತೆ.

**ಇಂದು, ದೇವಶಯನಿ ಆಷಾಢ ಏಕಾದಶಿ;** ವಾರಕರಿ ಸಂತರಿಂದ, ನಾಡಿನಾದ್ಯಂತ, ವಿಠ್ಠಲ–ರುಕ್ಮಾಯಿ ಮಂದಿರಗಳಲ್ಲಿ, ವಿಶೇಷ ಪೂಜೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>